ಕೊಟ್ಟಿದ್ದಾರೆ. ನಾನು ಆ ಪತ್ರಿಕಾ ಹೇಳಿಕೆಯನ್ನು ತಮಗೆ ಕಳುಹಿಸಿಕೊಟ್ಟು ಇದು ಹಕ್ಕುಚ್ಯುತಿಯಾಗಿದೆ ಆದುದರಿಂದ ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಬೇಕೆಂದು ನಾನು ಕೇಳಿಕೊಂಡಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಆ ರೀತಿ ಅಧಿಕಾರ ಇದ್ದರೆ ತಾವು ಆದನ್ನು ಹೇಳಿ. ಎರಡನ್ನೂ ಚರ್ಚೆಗೆ ಇಡಬಹುದು. ಸಮಿತಿಯ ಛೇರ್ಮನ್‌ಗೆ ಅಧಿಕಾರವಿದೆ, ಸದಸ್ಯರಿಗೆ ಇಲ್ಲವೆಂದು....

ಅಧ್ಯಕ್ಷರು:- ನಿಮ್ಮ ಹಕ್ಕುಚ್ಯುತಿ ಸೂಚನೆ ನಮ್ಮ ಕಛೇರಿಗೆ 6-1-93ರಂದು ಬಂದಿದೆ. ಅವತ್ತು ತಾವು ಕೊಟ್ಟ ರತಕ್ಕ ಪ್ರಿವಿಲೇಜ್ ನೋಟೀಸಿನ ಬಗ್ಗೆ ಇವತ್ತು ನಾನು ತೀರ್ಮಾನವನ್ನು ಕೊಡುವವನಿದ್ದೇನೆ. ಮಾನ್ಯ ಅಜೀಜ್ ಸೇಠ್‌ರವರ ಸೂಚನೆಯ ಬಗ್ಗೆ ಕೂಡ ಇವತ್ತು ನಾನು ತೀರ್ಮಾನವನ್ನು ಕೊಡುವವನಿದ್ದೇನೆ. ಅದೇ ರೀತಿ ಮಾನ್ಯ ಸದಸ್ಯರಾದ ಕೌಜಲಗಿಯವರು ಕೊಟ್ಟ ರತಕ್ಕ ಹಕ್ಕುಚ್ಯುತಿ ಸೂಚನೆಯ ಬಗ್ಗೆ ಕೂಡ ಇವತ್ತು ನಾನು ನನ್ನ ತೀರ್ಮಾನವನ್ನು ಕೊಡುವವನಿದ್ದೇನೆ. ಈಗ ವಿಧೇಯಕಗಳನ್ನು ಪರಿಶೀಲನೆಗೆ ತೆಗೆದುಕೊಳ್ಳೋಣ.

ಶಾಸನ ರಚನಾ ಕಾರ್ಯಕಲಾಪಗಳು

1990ರ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ

(ಪರ್ಯಾಲೋಚನಾ ಪ್ರಸ್ತಾವ)

† ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೆ, 1990ರ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಕವನ್ನು ಜಂಟಿ ಪರಿಶೀಲನಾ ಸಮಿತಿಯ ವರದಿಯಂತೆ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಇದು ಜಂಟಿ ಪರಿಶೀಲನಾ ಸಮಿತಿಗೆ ಹೋಗಿ ಬಂದಿದೆ. ಇದರ ಬಗ್ಗೆ ಚರ್ಚೆಗೆ ಅವಕಾಶವೇನೂ ಇಲ್ಲ. ಆದರೆ ಒಂದೇ ಒಂದು ವಿಚಾರ ಎಂದರೆ ಈ ವರದಿಯನ್ನು ಸಲ್ಲಿಸುವಾಗ ಈ ಸಮಿತಿಯ ಸದಸ್ಯರಾದ ಮಾನ್ಯ ಮಲ್ಲಿಕಾರ್ಜುನ್ ಎನ್ನತಕ್ಕವರು ತಮ್ಮ ಡಿಸೆಂಟ್ ನೋಟನ್ನು ಕೊಟ್ಟಿದ್ದಾರೆ. ಇದರಲ್ಲಿ he has raised a valid question about competency of the Legislature particularly ಅನುಬಂಧ 5ರಲ್ಲಿ I am quoting the Report.. ಭಾರತ ಸರ್ಕಾರ ರಚಿಸಿರುವ ಕಾನೂನನ್ನು ರಾಜ್ಯಸರ್ಕಾರ ಕೆಲವೊಂದು ವಿಷಯಗಳಲ್ಲಿ ಮೂಲಭೂತ ತತ್ವ ಮಾರ್ಪಾಡು ಆಗದ ರೀತಿ ತಿದ್ದುಪಡಿ ಮಾಡಬಹುದು ಆದರೆ ನಮ್ಮ ಈ ವಿಧೇಯಕದಲ್ಲಿ ಮೂಲ ತತ್ವವನ್ನೇ ಬದಲಾಯಿಸಲು ಸೂಚಿಸಿರುವುದರಿಂದ ನನ್ನ ಅಭಿಪ್ರಾಯದಲ್ಲಿ ರಾಜ್ಯ ಸರ್ಕಾರಕ್ಕೆ ಇಂಥ ವಿಧೇಯಕ ತರಲು ಅಧಿಕಾರವಿಲ್ಲ.

11-30 A.M

It is a fundamental question ನಾವು ಈ ಮಸೂದೆಯನ್ನು ಬೇಸಿಕ್ ಆಗಿ ಸ್ವಾಗತಿಸಿದರೂ, ಈ ಅಧಿಕಾರ ಇಲ್ಲ ಎನ್ನತಕ್ಕಂಥಾದ್ದನ್ನು ಜವಾಬ್ದಾರಿಯುತ ಜಂಟಿ ಸಲಹಾ ಸಮಿತಿಯ ಅಧ್ಯಕ್ಷರೇ ಹೇಳಿರುವುದರಿಂದ ಮಾನ್ಯ ಕಾನೂನು ಮಂತ್ರಿಗಳು ಇದರ ಬಗ್ಗೆ ಆಲೋಚನೆ ಮಾಡುತ್ತೀರೋ because if there is no competency how can we legislate on such a bill and other things I don't question I welcome. Before the bill being introduced, this aspect has to be taken note of. I seek clarification from the Hon'ble Minister...

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಚಂದ್ರೇಗೌಡರು ಹೇಳಿರುವ ವಿಷಯಕ್ಕೆ ಬರುತ್ತೇನೆ. ಪ್ರಾರಂಭಿಕವಾಗಿ ಈ ವಿಧೇಯಕದ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಈ ವಿಧೇಯಕ ಹಿಂದೆ ವಿಧಾನ ಸಭೆ, ವಿಧಾನ ಪರಿಷತ್ತಿನ ಮುಂದೆ ಬಂದು ಜಂಟಿ ಸಲಹಾ ಸಮಿತಿ ಪರಿಶೀಲನೆಗೆ ಹೋಗಿತ್ತು. ಜಂಟಿ ಸಲಹಾ ಸಮಿತಿ ಸದಸ್ಯರು ದೇಶದ ಎಲ್ಲಾ ಭಾಗಗಳಲ್ಲಿ ಪ್ರವಾಸ ಮಾಡಿ ಬಂದು ಬೇರೆ ರಾಜ್ಯಗಳಲ್ಲಿರತಕ್ಕಂತಹ ಪರಿಸ್ಥಿತಿಯನ್ನು ನೋಡಿ ಕೊನೆಗೆ ತಮ್ಮ ವರದಿಯನ್ನು ಕೊಟ್ಟರು. ಆ ವರದಿಯ ಆಧಾರದ ಮೇಲೆ ಈ ವಿಧೇಯಕ ರಚನೆಯಾಗಿದೆ. ಈ ವಿಧೇಯಕದ ಬಹು ಮುಖ್ಯವಾದ ಅಂಶಗಳು ಎಂದರೆ ಈ ಸಾಮಾಜಿಕ ಕ್ಷೇತ್ರದಲ್ಲಿ ಕ್ರಾಂತಿಕಾರಿಯಾದಂಥ ಹೊಸ ಹೆಜ್ಜೆಯನ್ನು ಇದರಲ್ಲಿ ಕರ್ನಾಟಕ ರಾಜ್ಯ ಇಟ್ಟಿದೆ. ವಿಶೇಷವಾಗಿ ಹೆಣ್ಣು ಮಕ್ಕಳ ಹಕ್ಕುಭಾದ್ಯತೆಗೆ ಸಂಬಂಧಪಟ್ಟಂತೆ ಈ ಸಾಮಾಜಿಕ ಅಸಮತೆ ಏನು ಇತ್ತು ಗಂಡು ಮಕ್ಕಳಿಗೆ ಒಂದು ಹಕ್ಕು ಹೆಣ್ಣುಮಕ್ಕಳಿಗೆ ಒಂದು ಹಕ್ಕು ಎಂದು, ಇದನ್ನು ನಿವಾರಿಸುವುದಕ್ಕೋಸ್ಕರ ಜಂಟಿ ಸಲಹಾ ಸಮಿತಿ ಹೆಣ್ಣು ಮಕ್ಕಳಿಗೆ ಅವಿಭಕ್ತ ಕುಟುಂಬದಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ನೀಡಿ ಅಸಮಾನತೆಯನ್ನು ನಿವಾರಿಸಿದೆ. ಪಿತ್ರಾರ್ಜಿತ ಆಸ್ತಿಯಲ್ಲಿ ಯಾವ ರೀತಿ ಗಂಡು ಮಕ್ಕಳಿಗೆ ಹಕ್ಕು ಬರುತ್ತದೆಯೋ ಅದೇ ರೀತಿ ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೂ ವೆಸ್ಟೆಡ್ ಇಂಟರೆಸ್ಟ್ ಬೈ ಬರ್ತ್ ಹಕ್ಕನ್ನು ಕೊಡಬೇಕೆಂದು ಆಲೋಚಿಸಿ ಮಾಡಲಾಗಿದೆ. ಆ ಮೂಲಕ ಹೆಣ್ಣುಮಕ್ಕಳ ಹಕ್ಕನ್ನು ಆಸ್ತಿ ಸಂಬಂಧದಲ್ಲಿ ಕೂಡ ಮಾಡುವಂತಹ ಪ್ರಯತ್ನ. ಇದು ಮೊದಲನೆಯದಲ್ಲ, ಇದು ನನ್ನ ದೃಷ್ಟಿಯಲ್ಲಿ 3ನೇ ಪ್ರಯತ್ನವಾಗಿದೆ. ಹಳೆಯ ಮೈಸೂರಿನಲ್ಲಿ 1933ರಲ್ಲಿ Hindu Women's Right to Property Act.. ಈ ಒಂದು ಕಾಯಿದೆಯನ್ನು ಹಳೇ ಮೈಸೂರಿನಲ್ಲಿ ನಾವು ತಂದಿದ್ದೆವು. ಆದರಲ್ಲಿ ಆಸ್ತಿ ವಿಭಾಗವಾಗುವ ಸಮಯದಲ್ಲಿ ತಂದೆಗೆ ಬರುವಂತಹ ಹಿಸ್ಸೆಯಲ್ಲಿ ಅರ್ಧ ಭಾಗ ಅವರ ಪತ್ನಿಗೂ ಅಥವಾ 1/4 ಭಾಗ ಹೆಣ್ಣುಮಕ್ಕಳಿಗೂ ಬರಬೇಕೆಂದು ಆಟ್ ದಿ ಟೈಂ ಆಫ್ ಪಾರ್ಟಿಷನ್ ಕೊಡಬೇಕೆಂದು ನಿಗದಿಯಾಗಿತ್ತು. ಇದು ಪ್ರಥಮ ಬಾರಿಗೆ ಅಲ್ಲ ಹೆಣ್ಣುಮಕ್ಕಳಿಗೆ ಅಲ್ಲಿಯವರೆಗೆ ಬರೀ ಜೀವನಾಂಶದ ಹಕ್ಕು ಇತ್ತು ಅದೂ ಮದುವೆಯಾಗದೇ ಇರತಕ್ಕಂಥ ಹೆಣ್ಣು ಮಕ್ಕಳಿಗೆ. ಆದಾದ ನಂತರ ಹೆಣ್ಣುಮಕ್ಕಳಿಗೆ ಅಲ್ಪ ಸ್ವಲ್ಪ ಭಾಗ ಕೊಡಬೇಕೆಂದು ತೀರ್ಮಾನವಾಯಿತು. ನಮ್ಮ ಸಂವಿಧಾನ ರಚನೆಯಾದ ಮೇಲೂ 1950ನೇ ಇಸವಿ ಜನವರಿ 26 ಆದ ಮೇಲೂ ಕೂಡ 1956ನೇ ಇಸವಿಯಲ್ಲಿ ಕೇಂದ್ರ ಸರಕಾರ ಲೋಕಸಭೆ, ರಾಜ್ಯ ಸಭೆಯಲ್ಲಿ ಹಿಂದೂ Women's Right to Property Act. ಹಿಂದೂ ಸಕ್ಸೆಷನ್ ಆಕ್ಟ್ ಆದು ಜಾರಿಗೆ ಬಂತು. ಆಲ್ಲಿ ಹೆಣ್ಣುಮಕ್ಕಳಿಗೆ ಇನ್ನೂ ಪಾರ್ಟಿಷನ್ ಆಗದೇ ಹೋದರೂ ಕೂಡ ಹೆಣ್ಣುಮಕ್ಕಳಿಗೆ ಕೆಲವು ಹಕ್ಕುಗಳನ್ನು ಕೊಡಬೇಕೆಂದು ತೀರ್ಮಾನವಾಯಿತು. ಎಷ್ಟು ಹಕ್ಕು ಎಂದರೆ, ತಂದೆ ಇದ್ದ ಕಾಲದಲ್ಲಿ ವಿಭಾಗವಾಗಿದ್ದರೆ ತಂದೆ ಹೆಸರಿಗೆ ಎಷ್ಟು ಬರುತ್ತಿತ್ತು ಆ ತಂದೆಯ ಹಿಸ್ಸೆಯಲ್ಲಿ ಗಂಡು ಮಕ್ಕಳಿಗೆ, ಹೆಣ್ಣುಮಕ್ಕಳಿಗೆ ಸಮನಾಗಿ ಹಕ್ಕನ್ನು ಕೊಡಬೇಕೆಂದು ಅಲ್ಲಿ ಕಾನೂನಲ್ಲಿ ತೀರ್ಮಾನವಾಯಿತು. ಆದರೂ ಕೂಡ ಗಂಡು ಮಕ್ಕಳಿಗಿಂತ 1/4 ಭಾಗ 1/8 ಭಾಗ ಹೆಣ್ಣುಮಕ್ಕಳಿಗೆ ಕಡಿಮೆ ಬರುವುದು. Depending upon the number of children testator had. ಈ ಒಂದು ಅಸಮತೆಯನ್ನು ನಿವಾರಿಸಬೇಕೆಂದು, ಗಂಡು ಮಕ್ಕಳಿಗೆ ಎಷ್ಟು ಹಿಸ್ಸೆ ಇದೆಯೋ ಅದೇ ರೀತಿ ಹೆಣ್ಣುಮಕ್ಕಳಿಗೆ ಕೊಡಬೇಕೆಂದು ವಿಧೇಯಕದಲ್ಲಿ ರಚನೆ ಮಾಡಲಾಗಿದೆ. ಇದರಲ್ಲಿ ಮತ್ತೊಂದು ಉದ್ದೇಶ ಏನು ಎಂದರೆ ಸಾಮಾಜಿಕ ಪಿಡುಗು ಏನು ಇದೆ ವರದಕ್ಷಿಣೆ ಪಿಡುಗು, ಹಿಂಸಾಚಾರ ಮಾಡುವುದು ಹೆಣ್ಣುಮಕ್ಕಳನ್ನು ಸುಡತಕ್ಕಂತಹ ಕೊಲೆ ಮಾಡುವುದು, ಅಥವಾ ಅವರೇ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿಯನ್ನು ನಮ್ಮ ಸಮಾಜ ನೋಡುತ್ತಿದೆ. ಇದರ ಒಂದು ಪರಿಹಾರಕ್ಕೋಸ್ಕರವಾಗಿ ಈ ಮಸೂದೆಯನ್ನು ಕೊಟ್ಟು ಹೆಣ್ಣುಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ಒಟ್ಟು ಕುಟುಂಬದ ಆಸ್ತಿಯಲ್ಲಿ ಸಮನಾದ ಹಕ್ಕನ್ನು ಕೊಡಬೇಕೆಂದು ಮಾಡಿದೆ. ಇದು ನಮ್ಮ

ಕರ್ನಾಟಕ ರಾಜ್ಯದ ಶಾಸನಸಭೆಯ ಒಂದು ಕ್ಷೇತ್ರದಲ್ಲಿ ಹೊಸ ಮಜಲು ಎಂದು ನಾನು ಅರಿಕೆ ಮಾಡಲು ಇಷ್ಟ ಪಡುತ್ತೇನೆ. ಮಾನ್ಯ ಸದಸ್ಯರಾದಂಥ ಚಂದ್ರೇಗೌಡರು ಮತ್ತಿತರ ಸದಸ್ಯರು ಆಕ್ಷೇಪಣೆ ಎತ್ತಿ ಸೂಚನೆ ಮಾಡಿದ್ದಾರೆ. ಭಾರತ ಸರ್ಕಾರ ರಚಿಸಿರುವ ಕಾನೂನನ್ನು ರಾಜ್ಯ ಸರ್ಕಾರ ಕೆಲವೊಂದು ವಿಷಯಗಳ ಮೂಲ ತತ್ವಗಳು ಮಾರ್ಪಾಡಾಗದ ರೀತಿ ತಿದ್ದುಪಡಿ ಮಾಡಬೇಕು. ಆದರೆ ನಮ್ಮ ವಿಧೇಯಕದಲ್ಲಿ ಮೂಲ ತತ್ವವನ್ನೇ ಬದಲಿಸುವುದಕ್ಕೆ ಸೂಚಿಸಲಾಗಿರುವುದರಿಂದ ನನ್ನ ಅಭಿಪ್ರಾಯದಲ್ಲಿ ರಾಜ್ಯ ಸರ್ಕಾರಕ್ಕೆ ಇಂಥ ವಿಧೇಯಕ ತರುವ ಅಧಿಕಾರವಿಲ್ಲವೆನ್ನುವ ಮಾತನ್ನು ಆಡಿದ್ದಾರೆ. ಆದರೆ ಮೂಲತತ್ವ ಮಾರ್ಪಾಡಾಗದ ರೀತಿ ತಿದ್ದುಪಡಿ ಮಾಡಬೇಕೆಂದು ಒಪ್ಪಿಕೊಂಡಿದ್ದರೂ ಹೆಣ್ಣುಮಕ್ಕಳಿಗೆ ಹಕ್ಕು ಕೊಡಬೇಕೆನ್ನುವುದು ಲಾಗಾಯ್ತು ನಿಂದಲೂ ನಮ್ಮ ಶಾಸನ ಸಭೆ ಒಪ್ಪಿದೆ, ಕೇಂದ್ರ ಶಾಸನ ಸಭೆ ಒಪ್ಪಿದೆ. ಹಳೇ ಮೈಸೂರಿನ ಶಾಸನ ಸಭೆ ಒಪ್ಪಿ ಹೆಣ್ಣುಮಕ್ಕಳಿಗೆ ಕೆಲವು ಸಂದರ್ಭದಲ್ಲಿ ಕೊಡಬೇಕೆಂದು ಹೇಳಿ ಆಗಿದೆ. ಮೂಲ ತತ್ವದಲ್ಲಿ ಅದು ಅಡಗಿದೆ. ಆದ್ದರಿಂದ ತತ್ವದಲ್ಲಿ ಯಾವ ಬದಲಾವಣೆಯೂ ಇಲ್ಲ. ಅಂಶದಲ್ಲಿ ಅವರಿಗೆ ಕೊಡುತ್ತಿರತಕ್ಕಂಥ ಒಂದು ಪ್ರಮಾಣದಲ್ಲಿ ಹೆಚ್ಚು ಮಾಡಿದ್ದೇವೆಯೇ ವಿನಹ ಮೂಲದಲ್ಲಿ ಇಲ್ಲ. ಅದು ಅಲ್ಲದೆ ಸಂವಿಧಾನದಲ್ಲಿ.... Entry No.5 - List no. III - Concurrent List - it provides:

> 'Marriage and divorce; infants and minors; adoption; wills, intestacy and succession joint family and partition; all matters in respect of which parties in judicial proceedings were immediately before the commencement of this Constitution subject to their personal law.

ಕೇಂದ್ರ ಸರ್ಕಾರಕ್ಕೂ ಅಧಿಕಾರವಿದೆ, ರಾಜ್ಯ ಸರ್ಕಾರಕ್ಕೂ ಸಕ್ಷೆಶನ್ ಸಂಬಂಧವಾಗಿ ಕಾನೂನು ಮಾಡುವುದಕ್ಕೆ ಅಧಿಕಾರವಿದೆ. Seventh Schedule of the Constitution in List 3 Entry No.5 ಆದ್ದರಿಂದ ಮಾನ್ಯ ಜಂಟಿ ಸಲಹಾ ಸಮಿತಿಯ ಸದಸ್ಯರಾದಂಥ ಶ್ರೀ ಮಲ್ಲಿಕಾರ್ಜುನ್‌ರವರು ಎತ್ತಿರತಕ್ಕಂಥ ಏನು ಆಕ್ಷೇಪವಿದೆ ಅದರಂತೆ ಮೊದಲನೆಯದಾಗಿ ವಾಸ್ತವದೃಷ್ಟಿಯಿಂದ ಮೂಲ ತತ್ವವನ್ನು ಬದಲಾಯಿಸಿಲ್ಲ. ಎರಡನೆಯದು ಮೂಲ ತತ್ವವನ್ನು ಒಂದು ಪಕ್ಷ ಬದಲಿಸಿದ್ದರೂ ಆ ಬದಲಿಸತಕ್ಕಂಥ ಹಕ್ಕು ರಾಜ್ಯ ಶಾಸನಸಭೆಗೆ ಇದೆ. ಆ ಕಾರಣದಿಂದ ಇಂಥ ಒಂದು ಪ್ರಗತಿಪರವಾದಂಥ ಚಾರಿತ್ರಿಕವಾದಂಥ ಒಂದು ವಿಧೇಯಕ ನಮ್ಮ ಮುಂದೆ ಬಂದಿದೆ. ಇದಕ್ಕೆ ಹಿರಿಯರಾದ ಎಲ್ಲಾ ಪಕ್ಷದ ಸದಸ್ಯರು ಜಂಟಿ ಸಲಹಾ ಸಮಿತಿಯ ಸದಸ್ಯರಾಗಿ ಕೆಲವು ಸೂಕ್ತ ಸಲಹೆಗಳನ್ನು, ಮಾರ್ಗದರ್ಶನವನ್ನು ಮಾಡಿದ್ದಾರೆ. ಆದ್ದರಿಂದ ಈ ಒಂದು ವಿಧೇಯಕಕ್ಕೆ ಬೆಂಬಲವನ್ನು ಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

† ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಅಧ್ಯಕ್ಷರೆ, ಇದು ಒಂದು ಪ್ರಗತಿಪರವಾದಂಥ ಮಸೂದೆ. ಈಗಾಗಲೇ ಇದು ಶಾಸನಸಭೆಯಲ್ಲಿ ಚರ್ಚೆಬಂದಾಗ ಜಂಟಿ ಸಲಹಾ ಸಮಿತಿಯ ಮುಂದೆ ಹೋಗಿ ಇವತ್ತು ಪುನಃ ಅದರ ಮನ್ನಣೆಯನ್ನು ಪಡೆದು ಬಂದಿದೆ. ಇದಕ್ಕೆ ನಮ್ಮ ಪಕ್ಷದ ಪರವಾಗಿ ಸ್ವಾಗತ ಮಾಡುತ್ತೇನೆ. ನಾವು ಕಾನ್‌ಸ್ಟಿಟ್ಯೂಷನ್ ಪ್ರಕಾರ ಅದರ ಮೇಲೆ ಏನು ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಏತಕ್ಕೆಂದರೆ ಹೆಣ್ಣುಮಕ್ಕಳಿಗೆ ಸೋಷಿಯಲ್ ಎಕಾನಮಿ ನೀಡುವಂಥದ್ದಾಗಬೇಕಾಗಿದೆ. ಆ ದೃಷ್ಟಿಯಿಂದ ಸೆಲ್ಫ್ ಅಕ್ವೈರ್ಡ್ ಪ್ರಾಪರ್ಟಿಯ ಬಗ್ಗೆ ಆಕ್ಟ್ ಬಂದಿದೆ. ಆದರೆ ಪೆರೆಂಟರ್ ಪ್ರಾಪರ್ಟಿಯಲ್ಲಿ ಅವರಿಗೆ ಒಂದು ಅಧಿಕಾರ, ರೈಟ್ ಕೊಡುವ ಮಸೂದೆ ತಂದಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇನೆ. ಇಲ್ಲಿ ಒಂದೇ ಒಂದು ಸರ್ಕಾರಕ್ಕೆ ಹೇಳುತ್ತೇನೆ. ಈ ಮಸೂದೆ ಆಂಧ್ರ ಪ್ರದೇಶದಲ್ಲಿ ಈಗಾಗಲೇ ಜಾರಿಗೆ ಬಂದಿದೆ. ಆದರೆ ಅದನ್ನು ಇಂಪ್ಲಿಮೆಂಟ್ ಮಾಡಲಾಗುತ್ತಿಲ್ಲ. ಹಾಗಾಗಿ ಸರ್ಕಾರ ಕೇವಲ ಪಾಸ್ ಮಾಡಿ ಹೋದರೆ

ಕೆಲಸವಾಗುವುದಿಲ್ಲ. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಪುನಃ ಇದನ್ನು ಸ್ವಾಗತ ಮಾಡುತ್ತೇನೆ.

ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಅಧ್ಯಕ್ಷರೆ, ಈ ಮಸೂದೆಯನ್ನು ಏನು ಇವತ್ತು ಕರ್ನಾಟಕ ಸರ್ಕಾರ ತಂದಿದೆ ಅದನ್ನು ಸಂಪೂರ್ಣವಾಗಿ ಇಲ್ಲಿರುವ ಎಲ್ಲಾ ಮಾನ್ಯ ಶಾಸಕರು ಸ್ವಾಗತಿಸಬೇಕೆಂದು ನಾನು ಮಹಿಳೆಯರ ಪರವಾಗಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಏಕೆಂದರೆ, ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಅವರು ಒಂದು ಸಣ್ಣ ದೋಷವನ್ನು ಹುಡುಕಿದ್ದಾರೆ, ಅದು ಇರುವ ದೃಷ್ಟಿಯಿಂದ ಇದನ್ನು ಪಾಸ್ ಮಾಡಬಾರದೆಂದು ಮಾನ್ಯ ಚಂದ್ರೇಗೌಡರು ಹೇಳಿದರು. ಮಾನ್ಯ ಚಂದ್ರೇಗೌಡರಿಗೆ 4 ಜನ ಹೆಣ್ಣುಮಕ್ಕಳಿದ್ದಾರೆ. ತಾವು ಎಲ್ಲರಿಗಿಂತ ಮುಖ್ಯವಾಗಿ ಅಂಥದ್ದನ್ನು ಕಡೆಗಣಿಸಿ ಮಸೂದೆಯನ್ನು ಇವತ್ತು ಸ್ವಾಗತ ಮಾಡಿ, ತಾವು ಎಲ್ಲರೂ ಮಂಜೂರ್ಮಾಡಬೇಕೆಂದು ಹೇಳಬೇಕಾಗಿತ್ತು. ಆದರೆ ಒಂದು ಸಣ್ಣ ವಿಷಯವನ್ನು ಇಟ್ಟುಕೊಂಡು ಇದನ್ನು ವಿಚಾರ ಮಾಡಬೇಕೆಂದು ಹೇಳಿದ್ದುದು ಸರಿಯಲ್ಲ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ಅವರು ನನ್ನ ಗುರುಗಳು. ನಾನು ತಪ್ಪು ಹೇಳಿದ್ದರೂ ಅದನ್ನು ಕರೆಕ್ಟ್ ಮಾಡುತ್ತಾರೆಂದು ಅಂದುಕೊಂಡಿದ್ದೇನೆ. ಹೆಣ್ಣುಮಕ್ಕಳಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಕೊಡುವ ಕ್ರಾಂತಿಕಾರ ಮಸೂದೆಗೆ ಯಾರೂ ಚಕಾರ ಎತ್ತಬಾರದು.

ಶ್ರೀ ವಾಟಾಳ್ ನಾಗರಾಜ್:- ನಾನು ಉಸುರೇ ಎತ್ತುವುದಿಲ್ಲ.

ಶ್ರೀಮತಿ ಮೋಟಮ್ಮ:- ಉಸಿರು ಎತ್ತದಿದ್ದರೆ ಅಭಿನಂದಿಸುತ್ತೇನೆ. ತಮಿಳ್ನಾಡು, ಕೇರಳ, ಆಂಧ್ರಪ್ರದೇಶ ರಾಜ್ಯಗಳಿಗೆ ಭೇಟಿ ಕೊಟ್ಟು ಅಲ್ಲಿ ಈ ಮಸೂದೆಯಿಂದ ಹೆಣ್ಣುಮಕ್ಕಳಿಗೆ ಎಷ್ಟು ಅನುಕೂಲವಾಗಿದೆ, ಆರ್ಥಿಕ ಮತ್ತು ಸಾಮಾಜಿಕ ಭದ್ರತೆ....

ಶ್ರೀ ಡಿ.ಬಿ. ಚಂದ್ರೇಗೌಡ:- ವಿಧಿಬಿಂದು ಇದೆ. ಅವರು ಜಂಟಿ ಸಲಹಾ ಸಮಿತಿಯ ಸದಸ್ಯರಾಗಿದ್ದಾರೆ. ಯಾವುದೇ ಜಂಟಿ ಸಲಹಾ ಸಮಿತಿಯಲ್ಲಿ ಪರಿಶೀಲಿಸಲ್ಪಟ್ಟ ಮಸೂದೆ ಚರ್ಚೆಗೆ ಬಂದರೂ ಆ ಸಮಿತಿಯ ಸದಸ್ಯರು ಆ ಚರ್ಚೆಯಲ್ಲಿ ಪಾಲ್ಗೊಳ್ಳಬಾರದೆಂದು ನಿಯಮ ಇದೆ. ಆ ನಿಯಮವನ್ನು ತಿಳಿದುಕೊಳ್ಳಿ. ಏತಕ್ಕೆ ಹೇಳಿದೆ ಎಂದರೆ, ನಿಯಮ ಹೇಳಿದ್ದಕ್ಕೆ ಕಾರಣ ಇದೆ. ಅವರು ಎತ್ತಿದಂಥ ಪ್ರಶ್ನೆ ಏನಿದೆ ಇಂಥ ಕ್ರಾಂತಿಕಾರಕ ಮಸೂದೆ ಶಾಸನವಾಗುವಾಗ ಶಾಸನದಲ್ಲಿ ದೋಷ ಇದೆ ಎಂಬುದು ಬರಬಾರದು. ಆ ದೋಷ ಇದೆ ಎಂಬ ವಿವಾದಾತ್ಮಕ ಮಾತನ್ನು ನಿಮ್ಮ ಸದಸ್ಯರು ಹೇಳಿದ್ದುದರಿಂದ ಮಾನ್ಯ ಸಂಸದೀಯ ಮಂತ್ರಿಗಳು ಆ ಬಗ್ಗೆ ಗಮನ ಹರಿಸಬೇಕು. ಶಾಸನಸಭೆಯ ರೆಕಾರ್ಡ್‌ನಲ್ಲಿ ಕ್ಲಿಯರ್ ಆಗಿರಬೇಕು. ಹೊರಗಡೆ ಹೋದಾಗ ಯಾವುದೋ ಶಾಸನ ಮಾಡಿದ್ದಾರೆ, ಆ ಶಾಸನಕ್ಕೆ ಇದು ಇರಲಿಲ್ಲವೆಂದು ಯಾರೂ ಪ್ರಶ್ನೆ ಮಾಡಬಾರದು. ಆ ದೃಷ್ಟಿಯಿಂದ ಪರಿಪೂರ್ಣವಾಗಿರಲಿ ಎಂದು ವಿಧಿಬಿಂದುವನ್ನು ಎತ್ತಿದ್ದೇನೇ ಹೊರತು ಎಳ್ಳಷ್ಟೂ ವಿರೋಧವಿಲ್ಲ. ಇದು ಬೇಗ ಆಗಬೇಕೆಂದು ವಾದಿಸುವವರಲ್ಲಿ ನಾನೂ ಒಬ್ಬ. ಜೊತೆಗೆ ನನಗೆ ಆ ಸಮಸ್ಯೆ ಇಲ್ಲ.

ಶ್ರೀಮತಿ ಮೋಟಮ್ಮ:- ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಮುಂದುವರಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಸಮಿತಿಯ ಸದಸ್ಯರಾಗಿದ್ದುದು; ಅವರೂ ಮಾತನಾಡಿದ್ದಾರೆ.

ಅಧ್ಯಕ್ಷರು:- ವಿಧಿಬಿಂದುವನ್ನು ಏನು ಮಾಡುತ್ತೀರಿ? ನೀವು ಏನು ಹೇಳಬೇಕೆಂದಿದ್ದೀರಿ, ಅದನ್ನು ಆಕ್ಕಪಕ್ಕದವರಿಗೆ ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್:- ಅನಿವಾರ್ಯವಾಗಿ ಎದ್ದಿದ್ದರು; ವಿಧಿಬಿಂದು ಅಡ್ಡಬಂದದ್ದರಿಂದ ಕುಳಿತು ಆಯಿತು.

ಶ್ರೀಮತಿ ಮೋಟಮ್ಮ:- ಮೆಜಾರಿಟಿ ಇರುವವರು ನೀವು, ನಾವು ಅಲ್ಪಸಂಖ್ಯಾತರು. ಮಹಿಳೆಯರಿಗೆ ತೊಂದರೆಯಾಗಬಾರದೆಂದು ಮಾತನಾಡಿದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಸದಸ್ಯಿಣಿಯವರು ಹೆಣ್ಣು ಮಕ್ಕಳ ವಿಷಯವಾದುದರಿಂದ ಮಾತನಾಡಿದ್ದಾರೆ. ಯಾರೂ ವಿರೋಧ ಮಾಡುತ್ತಾರೆಂದು ತಿಳಿದುಕೊಳ್ಳಬಾರದು. ನಾವು ಮನೆಗೆ ಹೋಗಬೇಕಲ್ಲ?...

(ನಗು)

ಶ್ರೀ ವಾಟಾಳ್ ನಾಗರಾಜ್:- ಯಾರೇ ವಿರೋಧ ಮಾಡಿದರೂ ನಾನು ನಿಮ್ಮ ಪರ ಇದ್ದೇನೆ, ಹೆದರಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ನಾನು ಸಮಿತಿಯ ಸದಸ್ಯನೂ ಅಲ್ಲ, ಹೆಣ್ಣುಮಗಳೂ ಅಲ್ಲ. ಶ್ರೀಮತಿ ಮೋಟಮ್ಮನವರು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಚರ್ಚೆಯಲ್ಲಿ ಭಾಗವಹಿಸಲಿಲ್ಲ, ಕೆಲವು ಸಲಹೆ ಕೊಡುತ್ತಿದ್ದೇನೆ. ನಿಜಕ್ಕೂ ಈ ರಾಜ್ಯದ ಮಹಿಳೆಯರ ಪರವಾಗಿ ಧ್ವನಿ ಎಂಬ ರೂಪದಲ್ಲಿ ಮಾತನಾಡಿದರು. ಕ್ರಾಂತಿಕಾರಕ ಹೆಜ್ಜೆಯನ್ನು ಸರ್ಕಾರ ತೆಗೆದುಕೊಂಡಿರುವುದು ಮತ್ತು ಇದನ್ನು ಕಾರ್ಯಗತಗೊಳಿಸುವುದು ತುಂಬಾ ನಿಧಾನವಾಗಬಾರದು. ಇಡೀ ರಾಜ್ಯದಲ್ಲಿ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಚರ್ಚೆ ನಡೆಯುವ ಸಂದರ್ಭದಲ್ಲಿ ಪರ-ವಿರೋಧ ಎಷ್ಟೇ ಇದ್ದರೂ ಕೊನೆಗೆ ತೀರ್ಮಾನ ಮಾನ್ಯ ಸದಸ್ಯರು ಇಲ್ಲಿ ಅದನ್ನು ಇಂಪ್ಲಿಮೆಂಟ್ ಮಾಡುತ್ತಾರೋ ಇಲ್ಲವೋ ಎಂಬ ಅನುಮಾನ ಇದೆ. ಅದಕ್ಕೋಸ್ಕರ ಸರ್ಕಾರವನ್ನು ಒತ್ತಾಯಿಸುವುದು. ತಕ್ಷಣ ಕಾರ್ಯಗತವಾಗುವ ದಿಕ್ಕಿನಲ್ಲಿ ಪ್ರಯತ್ನ ಮಾಡಿ ಕ್ರಾಂತಿಕಾರಕ ಹೆಜ್ಜೆ ತೆಗೆದುಕೊಂಡಿರುವುದು ಸ್ವಾಗತಾರ್ಹ. ಅದಕ್ಕಾಗಿ ಭಾರತೀಯ ಜನತಾ ಪಕ್ಷದ ಪರವಾಗಿ ಅಭಿನಂದಿಸುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ ''1990ರ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ''ವನ್ನು ಜಂಟಿ ಪರಿಶೀಲನಾ ಸಮಿತಿಯ ವರದಿಯಂತೆ ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2:-

ಅಧ್ಯಕ್ಷರು:- ''ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:-

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, ''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ''1990ರ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಯ ವರದಿಯಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, ''1990ರ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಯ ವರದಿಯಂತೆ ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(2) ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ, 1992

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಶಿಕ್ಷಣ ಕ್ಷೇತ್ರದಲ್ಲಿ ಅನೇಕ ನಡೆಯಬಾರದ ಕೆಲಸಗಳು ನಡೆಯುತ್ತವೆಂದು ಸರ್ಕಾರದ ಗಮನಕ್ಕೆ ಬಂದಿದ್ದು, ಜನರಿಗೆ ಇದರಿಂದ ತೊಂದರೆ ಆಗಬಾರದು ಎನ್ನುವ ದೃಷ್ಟಿಯಿಂದ, ಸಾರ್ವಜನಿಕ ಹಿತದೃಷ್ಟಿಯಿಂದ ಮಾನ್ಯತೆ ಪಡೆಯದೆ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ನಿಷೇಧವನ್ನು ಶಾಸನದ ಮೂಲಕ ಸಮರ್ಪಕವಾಗಿ ತರುವ ದೃಷ್ಟಿಯಿಂದ ಹಾಗೂ ಅವುಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಅಗತ್ಯವೆಂದು ಸರ್ಕಾರ ಭಾವಿಸಿದೆ. 1991-92ರ ಶೈಕ್ಷಣಿಕ ವರ್ಷದಲ್ಲಿ ಪರೀಕ್ಷೆಗೆ ಹಾಜರಾಗಲು ಯಾವ ವಿದ್ಯಾರ್ಥಿಗಳಿಗೆ ಅನುಮತಿ ನೀಡಿರಲಿಲ್ಲವೋ ಅಂಥ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವುದಕ್ಕಾಗಿ ಕೆಲವು ಪ್ರಕರಣಗಳಲ್ಲಿ ನಿರ್ದೇಶನ ನೀಡಲೂ ಸಹ ರಾಜ್ಯ ಸರ್ಕಾರ ಹಕ್ಕನ್ನು ಇಟ್ಟುಕೊಂಡಿದೆ. ಈ ಉದ್ದೇಶಕ್ಕಾಗಿ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ಆದ್ಯಾದೇಶವನ್ನು ಈ ಹಿಂದೆ ತರಲಾಗಿತ್ತು. ಅದನ್ನು ಬದಲಾವಣೆ ಮಾಡಿ ಈ ಒಂದು ವಿಧೇಯಕವನ್ನು ಸಭೆಯ ಮುಂದೆ ತಂದಿದ್ದೇವೆ. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಇದೆ. ವಿದ್ಯಾ ಕ್ಷೇತ್ರ ಸುಗಮವಾಗಿ ನಡೆದುಕೊಂಡು ಹೋಗುವ ದೃಷ್ಟಿಯಿಂದ ಇದರ ಅಗತ್ಯ ಇದೆ. ಮತ್ತು ವಿದ್ಯಾರ್ಥಿಗಳ ದೃಷ್ಟಿಯಿಂದಲೂ ಇದನ್ನು ಮಾಡಲಾಗಿದೆ. ಆದುದರಿಂದ ಈ ವಿಧೇಯಕವನ್ನು ಸಭೆ ಒಪ್ಪಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

† ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷಿಣಿಯವರೇ, ಈ ಒಂದು ಮಸೂದೆಯನ್ನು ತರುವುದಕ್ಕಿಂತ ಮುಂಚೆ ಸರ್ಕಾರ ಈ ಇನ್‌ಟೇಕ್ ಹೆಚ್ಚು ಮಾಡುವ ವಿಚಾರದಲ್ಲಿಯಾಗಲೀ ಅಥವಾ ಯಾವ ಸಂಸ್ಥೆಗಳಿಗೆ ಅಫಿಲಿಯೇಷನ್ ಇಲ್ಲ, ಆ ಸಂಸ್ಥೆಗಳ ವಿಚಾರದಲ್ಲಿಯಾಗಲೀ ಸ್ಪಷ್ಟವಾದ ನಿಲುವು ಏನು ಎಂದು ನಮಗೆ ಗೊತ್ತಾಗಬೇಕು. ಶಿಕ್ಷಣ ಕ್ಷೇತ್ರದಲ್ಲಿ ಅಥವಾ ಶಿಕ್ಷಣ